157 ಸಿ ಬ ನಿ-72 = 04
ಬಿRK
2511

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್, ಇವರ ನಿಯಮ-72 ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಉತ್ತರ.

**ನಿಯಮ-72ರಡಿಯಲ್ಲಿ ಗಮನ ಸೆಳೆಯುವ ಸೂಚನೆ:-**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ರಕ್ತಹೀನತೆ ಇರುವ ಕಟ್ಟಡ ಕಾರ್ಮಿಕರಿಗೆ ನೀಡಲಾಗುವ ಕಿಟ್‌ನಲ್ಲಿ ಇರುವ ವಸ್ತುಗಳ ಬಗ್ಗೆ ಸಮಗ್ರ ಮಾಹಿತಿ, ನೀಡಲಾಗುವ ವಸ್ತುಗಳು ಪ್ರತಿಯೊಂದು ಕಿಟ್ ಐಟಂನ ಮಾರುಕಟ್ಟೆ ದರ, ಮಂಡಳಿ ಸದರಿ ಕಿಟ್ ಐಟಂಗಳನ್ನು ನಿಗಧಿಪಡಿಸಿದ ದರ, ಸದರಿ ವಸ್ತುಗಳ ಮತ್ತು ದರದ ಮೌಲ್ಯಮಾಪನ ಮಾಡಿದವರ ವಿವರ ಹಾಗೂ ಸದರಿ ಕಿಟ್‌ನಲ್ಲಿರುವ ವಸ್ತುಗಳಿಗೆ ದರ ನಿಗಧಿಪಡಿಸಿದ ಪ್ರಕ್ರಿಯೆಯ ವಿವರ ಹಾಗೂ ಪ್ರತಿಯೊಂದು ಆಯುಕ್ತರ ಕಾರ್ಯ ವ್ಯಾಪ್ತಿಯಲ್ಲಿ ನಿಖರವಾಗಿ 34000 ಕಾರ್ಮಿಕರಿಗೆ ಮಾತ್ರವೇ ಆಯುರ್ವೇದ ಔಷಧ ನೀಡಬೇಕು ಎಂಬುದಾಗಿ ಶಿಫಾರಸ್ಸು ಮಾಡಿರುವುದರ ಕುರಿತು ಮಾನ್ಯ ಮಂತ್ರಿಗಳ ಗಮನ ಸೆಳೆಯಲು ಅವಕಾಶ ನೀಡುವಂತೆ ಕೋರುತ್ತೇನೆ.

**ಉತ್ತರ:-**

ಮಂಡಳಿಯ ವತಿಯಿಂದ 2022-23ನೇ ಸಾಲಿನಲ್ಲಿ ಮಹಿಳಾ ಕಾರ್ಮಿಕರಿಗೆ ನ್ಯೂಟ್ರೀಷನ್ ಕಿಟ್ ಗಳನ್ನು ನೀಡಲಾಗಿರುತ್ತದೆ. ಅದೇ ರೀತಿ 2024-25ನೇ ಸಾಲಿನಲ್ಲಿ ರಕ್ತಹೀನತೆ ಇರುವ ಕಟ್ಟಡ ಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರಿಗೆ ನೀಡಲಾಗಿರುತ್ತದೆ.

2022-23 ಹಾಗೂ 2024-25 ನೇಯ ಸಾಲಿನಲ್ಲಿ ನೀಡಲಾಗಿರುವ ನ್ಯೂಟ್ರೀಷನ್ ಕಿಟ್ ಗಳಲ್ಲಿ ಈ ಕೆಳಕಂಡ ವಸ್ತುಗಳನ್ನು ಕಾರ್ಮಿಕರಿಗೆ ನೀಡಲಾಗಿರುತ್ತದೆ.

**2022-23 ನೇ ಸಾಲು**

| ಕ್ರ.ಸಂ | ಸಾಮಾಗ್ರಿಗಳು | ಪ್ರಮಾಣ |
|---|---|---|
| 1. | ನವಾಯಾಸ ಲೋಹ | 100 ಮಾತ್ರೆಗಳು |
| 2. | ಆಮಲಕಿ ಚೂರ್ಣ | 100 ಗ್ರಾಂ |
| 3. | ಕ್ಷೀರಬಲ ತೈಲ | 200 ಗ್ರಾಂ |
| 4. | ಲಾಕ್ಷಾದಿ ಗುಗ್ಗಲು | 160 ಮಾತ್ರೆಗಳು |
| 5. | ನೀಲಬೃಂಗಾದಿ ತೈಲ | 200 ಎಂಎಲ್ |
| 6. | ಗುಲಕಂದ್ | 400 ಗ್ರಾಂ |
| 7. | ಕುಷ್ಮಾಂಡ ರಸಾಯನ | 300 ಗ್ರಾಂ |

**2024-25ನೇ ಸಾಲು**

| ಕ್ರ.ಸಂ. | ಸಾಮಾಗ್ರಿಗಳು | ಪ್ರಮಾಣ |
|---|---|---|
| 1 | ಮಹಾನಾರಾಯಣ ತೈಲ | 500 ಎಂ.ಎಲ್ |
| 2 | ಚ್ಯವನ ಪ್ರಾಶ | 500 ಗ್ರಾಂ |
| 3 | ಧಾತ್ರಿ ಲೋಹ -1 ಗ್ರಾಂ (1000 ಎಂಜಿ) | 90 ಮಾತ್ರೆಗಳು |
| 4 | ಕೃಮಿಕುಟಾರ ರಸ-375 ಎಂಜಿ | 30 ಮಾತ್ರೆಗಳು |
| 5 | ಆರೋಗ್ಯ ವರ್ಧಿನಿ ವಟಿ-500 ಎಂಜಿ | 90 ಮಾತ್ರೆಗಳು |
| 6 | ಶತಾವರಿ ಚೂರ್ಣ | 150 ಗ್ರಾಂ |

ಮುಂದುವರೆದು, ಕಿಟ್‌ನಲ್ಲಿ ನೀಡಲಾಗಿರುವ ಐಟಂಗಳನ್ನು ರಾಷ್ಟ್ರದಲ್ಲಿ ಹಲವಾರು ಕಂಪೆನಿಗಳು ಉತ್ಪಾದಿಸಿ, ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದ್ದು, ಈ ವಸ್ತುಗಳ ದರಗಳು ಕಂಪೆನಿಯಿಂದ ಕಂಪೆನಿಗೆ ಬದಲಾಗುತ್ತಿರುತ್ತದೆ.

2022-23 ನೇ ಸಾಲಿನಲ್ಲಿ ಕೋವಿಡ್ 2ನೇ ಅಲೆ ಹಿನ್ನಲೆಯಲ್ಲಿ ಸರ್ಕಾರದಿಂದ ಕೆಟಿಪಿಪಿ ಕಾಯ್ದೆ, 1999 ರ ಕಲಂ 4 ಎ ರಡಿ ಪಡೆದಿದ್ದ ವಿನಾಯಿತಿಯನ್ವಯ ಅರ್ಹ ಸಂಸ್ಥೆಗಳಿಂದ ದರಪಟ್ಟಿ ಪಡೆದ ಕಿಟ್ ಗಳನ್ನು ಪಡೆದು ವಿತರಣೆ ಮಾಡಲಾಗಿರುತ್ತದೆ.

2023-24ನೇ ಸಾಲಿನಲ್ಲಿ ಈ ಮೇಲೆ ಹೇಳಿರುವ ಎಲ್ಲಾ ಐಟಂಗಳನ್ನು ಒಳಗೊಂಡ ಪ್ರತಿ ಕಿಟ್‌ಗೆ ಅಂದಾಜು ರೂ.2,600/- ಎಂದು ನಿಗದಿಪಡಿಸಲಾಗಿರುತ್ತದೆ. ಈ ಅಂದಾಜು ವೆಚ್ಚದಲ್ಲಿ ಕಿಟ್ ತಯಾರಿಕೆ, ಕ್ಷೇತ್ರ ಮಟ್ಟದ ಕಛೇರಿಗಳಿಗೆ ಸಾಗಾಣಿಕೆ ವೆಚ್ಚ ಮತ್ತು ನುರಿತ ವೈದ್ಯರ ಸಮ್ಮುಖದಲ್ಲಿ ಫಲಾನುಭವಿಗಳಿಗೆ ವಿತರಿಸುವ ವೆಚ್ಚವು ಸಹ ಒಳಗೊಂಡಿರುತ್ತದೆ. ಈ ಎಲ್ಲಾ ವಸ್ತುಗಳಿಗೆ ಚಾಲ್ತಿಯಲ್ಲಿದ್ದ ಮಾರುಕಟ್ಟೆ ದರಗಳನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಿ ನಿಗದಿಪಡಿಸಲಾಗಿರುತ್ತದೆ.

ಆಯುರ್ವೇದ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ವೈದ್ಯರು ಮತ್ತು ಆಯುಷ್ ಇಲಾಖೆಯ ಸಮಿತಿಯ ಅಭಿಪ್ರಾಯವನ್ನು ಪಡೆದು, ಕಿಟ್‌ನಲ್ಲಿ ಒಳಪಡಿಸಬೇಕಾದ ವಸ್ತುಗಳನ್ನು ನಿರ್ಧರಿಸಲಾಗಿರುತ್ತದೆ.

ಪ್ರತಿಯೊಂದು ಆಯುಕ್ತರ ಕಾರ್ಯ ವ್ಯಾಪ್ತಿಯಲ್ಲಿ ನಿಖರವಾಗಿ 34000 ಕಾರ್ಮಿಕರಿಗೆ ಮಾತ್ರವೇ ಆಯುರ್ವೇದ ಔಷಧ ನೀಡಬೇಕು ಎಂಬುದಾಗಿ ಯಾವುದೇ ಶಿಫಾರಸ್ಸು ಇರುವುದಿಲ್ಲ. ಮಂಡಳಿಯ ವತಿಯಿಂದ ಪ್ರತಿ ಸಹಾಯಕ ಕಾರ್ಮಿಕ ಆಯುಕ್ತರ ವ್ಯಾಪ್ತಿಗೆ ತಲಾ 26,000 ಕಿಟ್‌ಗಳಂತೆ ರಾಜ್ಯದಲ್ಲಿ 2.86 ಲಕ್ಷ ಕಿಟ್ ಗಳನ್ನು ವಿತರಿಸಲಾಗಿರುತ್ತದೆ.

**ಕಾಇ 291 ಎಲ್‌ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**